# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1543 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.03.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗಣಿ ಗುತ್ತಿಗೆ ನೀಡುವ ನಿಯಮಗಳೇನು; ಈವರೆಗೆ ಎಷ್ಟು ಗಣಿ ಗುತ್ತಿಗೆಯನ್ನು ಹೊಸದಾಗಿ ನೀಡಲಾಗಿದೆ ಮತ್ತು ನವೀಕರಿಸಲಾಗಿದೆ; ಇವುಗಳ ವಿತರಣೆ/ ನವೀಕರಣದ ಮಾನದಂಡಗಳೇನು; | • ಭಾರತ ಸರ್ಕಾರವು ಮುಖ್ಯ ಖನಿಜಗಳಿಗೆ ಸಂಬಂಧಿಸಿದಂತೆ, MMDR Act,1957 ಕ್ಕೆ 2015 ರಲ್ಲಿ ತಿದ್ದುಪಡಿ ತಂದಿರುತ್ತದೆ. ಸದರಿ ತಿದ್ದುಪಡಿ ಕಾಯ್ದೆ section 10A(2)(c) ರಡಿ 2 ವರ್ಷಗಳಲ್ಲಿ ಅಂದರೆ ದಿನಾಂಕ: 11.01.2017ರ ಒಳಗಾಗಿ ಅರ್ಹ ಅರ್ಜಿಯನ್ನು ವಿಲೇಮಾಡಲು ಅವಕಾಶ ನೀಡಲಾಗಿರುತ್ತದೆ. ತದನಂತರ, ಈ ಅರ್ಜಿಗಳು ಅನರ್ಹ ಅರ್ಜಿಗಳಾಗಿರುತ್ತವೆ.<br>• ಸದರಿ ತಿದ್ದುಪಡಿ ಕಾಯ್ದೆ section 10A(2)(b) ರಡಿ 2021 ರವರೆಗೆ ಅರ್ಹ ಅರ್ಜಿಯನ್ನು ವಿಲೇಮಾಡಲು ಅವಕಾಶ ನೀಡಲಾಗಿರುತ್ತದೆ. ತದನಂತರ, ಈ ಅರ್ಜಿಗಳು ಅನರ್ಹ ಅರ್ಜಿಗಳಾಗಿರುತ್ತವೆ.<br>• ಉಳಿದಂತೆ, ಮುಖ್ಯ ಖನಿಜಗಳ ಸಂಬಂಧ ಲಭ್ಯತೆ ದೃಢಪಟ್ಟಿರುವ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 10(B) ರಡಿಯಲ್ಲಿ ಹರಾಜು ಮೂಲಕ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಖನಿಜ ಲಭ್ಯತೆ ದೃಢಪಡದ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 11 ರಡಿಯಲ್ಲಿ ಸಂಯುಕ್ತ ಪರವಾನಿಗೆ (Composite Licence) (Prospecting-cum-Mining Lease) ನ್ನು ಸದರಿ ಕಾಯ್ದೆಯಡಿಯಲ್ಲಿ ರೂಪಿಸಲಾದ Mineral (Auction) Rules, 2015ರ ನಿಯಮ 9(4) ಮತ್ತು 10 ರಂತೆ ಹರಾಜು ಮಾಡಿ ಯಶಸ್ವಿಯಾದ ಬಿಡ್‌ದಾರರನ್ನು ಪರಿಗಣಿಸಿದ ನಂತರ The Mineral (Auction) Rules, 2015 ಮತ್ತು Mineral (Other Than Atomic and Hydro Carbons Energy Minerals) Concession Rules 2016 ರಡಿ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ 25 ಗಣಿ ಗುತ್ತಿಗೆಗಳನ್ನು ನೀಡಲಾಗಿದೆ.<br>• ಕೇಂದ್ರ ಸರ್ಕಾರವು ಮುಖ್ಯ ಖನಿಜಗಳಿಗೆ ಸಂಬಂಧಿಸಿದಂತೆ MMDR ಕಾಯ್ದೆ 1957 ಕ್ಕೆ 2015 ರಲ್ಲಿ ತಿದ್ದುಪಡಿ ಮಾಡಿದ್ದು ಇದರ ಅನ್ವಯ ಗಣಿಗುತ್ತಿಗೆ ನವಿಕರಣ ಮಾಡುವ ಪ್ರಕ್ರಿಯೆಯನ್ನು ಸದರಿ ಕಾಯ್ದೆಯಿಂದ ಕೈಬಿಡಲಾಗಿರುವುದರಿಂದ ಯಾವುದೇ ಗಣಿ ಗುತ್ತಿಗೆಯನ್ನು ನವೀಕರಣ ಮಾಡಲಾಗಿರುವುದಿಲ್ಲ.<br>• MMDR ತಿದ್ದುಪಡಿ ಕಾಯ್ದೆ 2015ರಲ್ಲಿ ನವೀಕರಣ ಬದಲಾಗಿ ಗಣಿಗುತ್ತಿಗೆ ಅವಧಿ ವಿಸ್ತರಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಿರುತ್ತದೆ. |
| ಆ) | ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ರಾಜಧನ, ದಂಡ ಹಾಗೂ ಬಡ್ಡಿ ಸೇರಿ ಹಲವಾರು ಕೋಟಿ ಸರ್ಕಾರಕ್ಕೆ ಬಾಕಿ ಉಳಿಸಿಕೊಂಡಿರುವ | • ಕೇಂದ್ರ ಸರ್ಕಾರವು ಮುಖ್ಯ ಖನಿಜಗಳಿಗೆ ಸಂಬಂಧಿಸಿದಂತೆ MMDR ಕಾಯ್ದೆ 1957ಕ್ಕೆ 2015 ರಲ್ಲಿ ತಿದ್ದುಪಡಿ ಮಾಡಿದ್ದು, ಇದರನ್ವಯ ಗಣಿಗುತ್ತಿಗೆ ನವಿಕರಣ ಮಾಡುವ ಪ್ರಕ್ರಿಯೆಯನ್ನು ಸದರಿ ಕಾಯ್ದೆಯಿಂದ ಕೈಬಿಡಲಾಗಿದ್ದು, ಯಾವುದೇ ಗಣಿ ಗುತ್ತಿಗೆಗಳನ್ನು ನವೀಕರಣ ಮಾಡಿರುವುದಿಲ್ಲ. |

<table>
<tr>
<td></td>
<td>ಕಂಪನಿಗೆ ಗಣಿ ಗುತ್ತಿಗೆ ನವೀಕರಣ ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ; ಪಾವತಿಗೆ ಬಾಕಿಯಿರುವ ಅಕ್ರಮ ಗಣಿಗಾರಿಕೆ ದಂಡ, ರಾಯಧನ ಹಾಗೂ ಬಡ್ಡಿ ಸೇರಿದಂತೆ ಒಟ್ಟು ಬಾಕಿ ಮೊತ್ತದ ವಿವರವೇನು; ಇದುವರೆಗೆ ಸಂಗ್ರಹಿಸಿದ ಮೊತ್ತವೆಷ್ಟು; ಬಾಕಿಯಿರುವ ಮೊತ್ತದ ವಸೂಲಿಗೆ ಕೈಗೊಂಡಿರುವ ಕ್ರಮಗಳೇನು;</td>
<td rowspan="2">• MMDR ತಿದ್ದುಪಡಿ ಕಾಯ್ದೆ 2015ರಲ್ಲಿ ನವೀಕರಣ ಬದಲಾಗಿ ಗಣಿಗುತ್ತಿಗೆ ಅವಧಿ ವಿಸ್ತರಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.<br>• ಭಾರತ ಸರ್ಕಾರದ ಎಂಎಂಡಿಆರ್ ಕಾಯ್ದೆ ಮತ್ತು Mineral (Auction) Rules-2015 ರಂತೆ ಗಣಿ ಪ್ರದೇಶಗಳ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿರುತ್ತದೆ. ಅದರಂತೆ, ಹರಾಜಾದ ಕಣ್ಣೂರುವಾಡಿ ಸುಣ್ಣದ ಕಲ್ಲಿನ ಬ್ಲಾಕ್ ನ ಪ್ರಕರಣದಲ್ಲಿ ಸರ್ಕಾರವು ಕಾನೂನು ಇಲಾಖೆ ಅಭಿಪ್ರಾಯ ಪಡೆದಿದ್ದು, ಅಭಿಪ್ರಾಯದ ಉದ್ಧೃತ ಭಾಗ ಈ ಕೆಳಕಂಡಂತಿದೆ.<br><br>ಗುಲಬರ್ಗ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ಕಣ್ಣೂರುವಾಡಿ ಮತ್ತು ಬೊಮ್ಮನಹಳ್ಳಿ ಗ್ರಾಮಗಳಲ್ಲಿ ಸುಣ್ಣದ ಕಲ್ಲಿನ ಬ್ಲಾಕ್ ನ್ನು ದಿನಾಂಕ:05.10.2020 ರ Notification & Notice inviting tender ರಡಿ ದಿನಾಂಕ:19.12.2020 ರಂದು ನಡೆದ ಇ-ಹರಾಜಿನಲ್ಲಿ ಮೆ|| ಎಸಿಸಿ ಲಿಮಿಟೆಡ್ ರವರು 35.15 % ಅತೀ ಹೆಚ್ಚು ಬಿಡ್ ಮೊತ್ತಕ್ಕೆ ಪಡೆದಿರುತ್ತಾರೆ. ಅದರಂತೆ, ದಿನಾಂಕ: 19.12.2020 ರಂದು ನಿಯಮಾನುಸಾರ Preferred Bidder ಎಂದು ಘೋಷಿಸಲಾಗಿರುತ್ತದೆ. Mineral (Auction) Rules-2015 ರಂತೆ ಆಗ್ಯೆ ಚಾಲ್ತಿಯಿದ್ದ ನಿಯಮಾವಳಿಗಳಂತೆ ಸದರಿ ಬಿಡ್ಡುದಾರರು ಹರಾಜಾದ ಪ್ರದೇಶದ upfront payment ಮೂರು ಕಂತುಗಳಲ್ಲಿ (10%, 10% ಮತ್ತು 80% of upfront payment) ಪಾವತಿಸಬೇಕಾಗಿರುತ್ತದೆ. ಈ ಪ್ರಕರಣದಲ್ಲಿ ರೂ.78.59 ಕೋಟಿ Upfront Payment ರ ಮೊದಲನೇ ಕಂತನ್ನು ದಿನಾಂಕ: 28.12.2020 ರಂದು ಪಾವತಿಸಲಾಗಿರುತ್ತದೆ. Letter of Intent ವಿತರಿಸಲು ಬಿಡ್ಡುದಾರರು upfront payment ನ ಮೊದಲ ಕಂತು ಪಾವತಿಸಿದ ನಂತರ Letter of Intent ಜಾರಿ ಮಾಡುವುದು ನಿಯಮಾನುಸಾರ ಕಡ್ಡಾಯವಾಗಿರುತ್ತದೆ. ಅದರಂತೆ, ಬಿಡ್ಡುದಾರರಿಗೆ ದಿನಾಂಕ:04.01.2021 ರಂದು Letter of Intent ಜಾರಿ ಮಾಡಲಾಗಿರುತ್ತದೆ. ಸದರಿ Letter of Intent ಅವಧಿ 03 ವರ್ಷ ಮಾತ್ರವಿದ್ದು, ಮತ್ತೆ 02 ವರ್ಷಗಳ ಅವಧಿಗೆ ವಿಸ್ತರಿಸಲು ನಿಯಮ 10(6)ರಡಿ ಅವಕಾಶವಿರುತ್ತದೆ. ಸದರಿ ನಿಯಮದ ಉದ್ಧೃತ ಭಾಗ ಈ ಕೆಳಕಂಡಂತಿದೆ:<br><br>Provided further that the State Government may allow a further period of two years for execution of the Mining Lease Deed if the reasons for delay were beyond the control of the preferred bidder.<br>• ಕಣ್ಣೂರು ವಾಡಿ ಸುಣ್ಣದಕಲ್ಲು ಬ್ಲಾಕ್ Letter of Intent ಅವಧಿಯು ಮೂಲತಃ ದಿನಾಂಕ:03.01.2024ಕ್ಕೆ ಅಂತ್ಯಗೊಂಡಿದ್ದು, ಪುನಃ 02 ವರ್ಷ ಅವಧಿ ವಿಸ್ತರಿಸಲು ಸದರಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದ್ದು, ತದನಂತರ ಅವಧಿ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲ.<br>• ಮುಂದುವರೆದು, ನಂತರದ ದಿನಗಳಲ್ಲಿ ಕಂಪನಿಯು ಬಾಕಿ ಮೊತ್ತ ಮತ್ತು ದಂಡ ಪಾವತಿಸದೇ ಇರುವ ಕಾರಣ ಕರಾರು ಒಪ್ಪಂದ ಜಾರಿಯಾಗಿರುವುದಿಲ್ಲ. MMDR ಕಾಯ್ದೆ ಮತ್ತು Mineral (Auction) Rules-2015ರ ನಿಯಮಗಳನ್ನು ಕೇಂದ್ರ ಸರ್ಕಾರವು ರೂಪಿಸುವ ಅಧಿಕಾರ ಹೊಂದಿರುವುದರಿಂದ ಹಾಗೂ ಪ್ರಸ್ತುತ Letter of Intent ಅವಧಿ ಮುಕ್ತಾಯವಾಗಿರುವುದರಿಂದ, ಈ ಪ್ರಕರಣದಲ್ಲಿ ಕಂಪನಿಯು ಮನವಿ ಸಲ್ಲಿಸಿ, ಗಣಿ ಗುತ್ತಿಗೆ ಕಾರ್ಯಗತಗೊಳಿಸಲು ವಿನಂತಿಸಿದ್ದು, Letter of Intent ಅವಧಿ ಮುಕ್ತಾಯವಾದ ಕಾರಣ ಮತ್ತು ಈ ಕಂಪನಿಯ ಮತ್ತೊಂದು ಗಣಿಗುತ್ತಿಗೆ ಪ್ರಕರಣದಲ್ಲಿ ಸರ್ಕಾರಕ್ಕೆ ಬಾಕಿ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.</td>
</tr>
<tr>
<td>ಇ)</td>
<td>ಗಣಿ ಗುತ್ತಿಗೆ ನವೀಕರಣಕ್ಕೆ ಸಂಬಂಧಿಸಿ ಕಾನೂನು ಇಲಾಖೆಯು ಸೂಚಿಸಿದ ಮಾನದಂಡಗಳೇನು; ಕಾನೂನು ಇಲಾಖೆಯ ಅಭಿಪ್ರಾಯವನ್ನು ಕಡೆಗಣಿಸಿ ಗಣಿ ಗುತ್ತಿಗೆ ನವೀಕರಣಕ್ಕೆ ಮುಂದಾಗಿರುವುದಕ್ಕೆ ಕಾರಣವೇನು; ಅಕ್ರಮ ಗಣಿಗಾರಿಕೆ ಹಾಗೂ ಸಕ್ರಮ ಗಣಿಗಾರಿಕೆಯಿಂದಾದ ತಗ್ಗು/ ಪ್ರಪಾತಗಳನ್ನು ಮುಚ್ಚಲು ಹಾಗೂ ಪರಿಸರವನ್ನು ರಕ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;</td>
</tr>
</table>

| ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೆಂಪು ಕಲ್ಲು ಸಹಿತ ಎಲ್ಲಾ ರೀತಿಯ ಎಷ್ಟು ಗಣಿ ಗುತ್ತಿಗೆ ಪರವಾನಿಗೆಗಳು ಚಾಲ್ತಿಯಲ್ಲಿ ಇವೆ; ಕಳೆದ ಮೂರು ವರ್ಷಗಳಲ್ಲಿ ವಸೂಲಾದ ದಂಡ, ರಾಜಧನ ಹಾಗೂ ಇನ್ನಿತರ ವಸೂಲಾತಿಗಳು ಎಷ್ಟು; ಅದನ್ನು ಯಾವ ಉದ್ದೇಶಗಳಿಗೆ ಯಾವ ನಿಯಮಗಳಂತೆ ಬಳಸಲಾಗಿದೆ; | (see below) |
|---|---|---|

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಉಪಖನಿಜ ಗಣಿ ಗುತ್ತಿಗೆ ವಿವರ ಕೆಳಕಂಡಂತಿದೆ:

| ಕ್ರ. ಸಂ. | ಉಪಖನಿಜದ ವಿಧ | ಚಾಲ್ತಿಯಲ್ಲಿರುವ ಗುತ್ತಿಗೆಗಳ ಸಂಖ್ಯೆ |
|---|---|---|
| 1 | ಲ್ಯಾಟರೈಟ್ | 25 |
| 2 | ಕಟ್ಟಡ ಕಲ್ಲು | 122 |
| 3 | ಮರಳು | 14 |
| 4 | ಅಲಂಕಾರಿಕ ಶಿಲೆ | 02 |

ಉಡುಪಿ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಉಪಖನಿಜ ಗಣಿ ಗುತ್ತಿಗೆ ವಿವರ ಕೆಳಕಂಡಂತಿದೆ:

| ಕ್ರ. ಸಂ. | ಉಪಖನಿಜದ ವಿಧ | ಚಾಲ್ತಿಯಲ್ಲಿರುವ ಗುತ್ತಿಗೆಗಳ ಸಂಖ್ಯೆ |
|---|---|---|
| 1 | ಮುರ ಕಲ್ಲು | 02 |
| 2 | ಕಟ್ಟಡ ಕಲ್ಲು | 148 |
| 3 | ಮರಳು | 17 |
| 4 | ಅಲಂಕಾರಿಕ ಶಿಲೆ | 03 |
| 5 | ಬೆಣಚುಕಲ್ಲು | 01 |
| 6 | ಸಿಲಿಕಾ ಮರಳು | 02 |
| 7 | ಜೇಡಿ ಮಣ್ಣು | 01 |

ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಣೆಯಾದ ರಾಜಧನ, ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ, ಹೆಚ್ಚುವರಿ ಪಾವತಿ ಮತ್ತು ದಂಡದ ವಿವರ ಕೆಳಕಂಡಂತಿವೆ:

ದಕ್ಷಿಣ ಕನ್ನಡ ಜಿಲ್ಲೆ:- (₹ ಲಕ್ಷಗಳಲ್ಲಿ)

| ಕ್ರ.ಸಂ. | ವರ್ಷ | ರಾಜಧನ | ಹೆಚ್ಚುವರಿ ಪಾವತಿ | ಡಿ.ಎಂ.ಎಫ್ | ದಂಡ |
|---|---|---|---|---|---|
| 1 | 2023-24 | 2897.60 | 707.44 | 621.00 | 298.00 |
| 2 | 2024-25 | 3653.50 | 404.51 | 877.34 | 117.00 |
| 3 | 2025-26 | 4809.56 | 577.98 | 1293.85 | 161.00 |

ಉಡುಪಿ ಕನ್ನಡ ಜಿಲ್ಲೆ:- (₹ ಲಕ್ಷಗಳಲ್ಲಿ)

| ಕ್ರ.ಸಂ. | ವರ್ಷ | ರಾಜಧನ | ಹೆಚ್ಚುವರಿ ಪಾವತಿ | ಡಿ.ಎಂ.ಎಫ್ | ದಂಡ |
|---|---|---|---|---|---|
| 1 | 2023-24 | 1876.63 | 607.47 | 336.72 | 127.09 |
| 2 | 2024-25 | 1731.33 | 526.17 | 412.87 | 166.28 |
| 3 | 2025-26 | 2229.69 | 563.75 | 637.94 | 94.19 |

ಗಣಿಗಾರಿಕೆಯಿಂದ ಸ್ವೀಕೃತವಾದ ರಾಜಸ್ವ ಮೊತ್ತವನ್ನು ರಾಜ್ಯ ಸಂಚಿತ ನಿಧಿ (State Consolidated Fund)ಗೆ ಜಮೆ ಮಾಡಲಾಗುತ್ತದೆ. ರಾಜ್ಯ ಸಂಚಿತ ನಿಧಿಯಿಂದ ಆಯವ್ಯಯದ ಮೂಲಕ ವಿವಿಧ ಇಲಾಖೆಗಳ ಯೋಜನೆಗಳಿಗೆ ಅನುದಾನವನ್ನು ನೀಡಲಾಗುತ್ತಿದೆ.

- ಉಪಖನಿಜ ಗಣಿ ಗುತ್ತಿಗೆದಾರರಿಂದ ಸಂಗ್ರಹಿಸುವ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮ-2016ರ ನಿಯಮ-18ರಂತೆ, ಡಿ.ಎಂ.ಎಫ್ ರಡಿ ಸಂಗ್ರಹವಾದ ಒಟ್ಟು ನಿಧಿಯಲ್ಲಿ ಶೇಕಡ.10% ರಷ್ಟು ಮೊತ್ತವನ್ನು ದತ್ತಿನಿಧಿಗೆ (ಎಂಡೊಮೆಂಟ್ ಉದ್ದೇಶಗಳಿಗಾಗಿ), ಶೇಕಡ.5% ರಷ್ಟು ಮೊತ್ತವನ್ನು ಆಡಳಿತ ವೆಚ್ಚಕ್ಕಾಗಿ ಮೀಸಲಿರಿಸಿದ ನಂತರ ಉಳಿದ 85% ನಿಧಿಯನ್ನು ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿಗಾಗಿ ವಿನಿಯೋಗಿಸಬೇಕಾಗಿದೆ.
- ಅದರಂತೆ, ಗಣಿಬಾಧಿತ ಪ್ರದೇಶದಲ್ಲಿನ ಹೆಚ್ಚಿನ ಆದ್ಯತಾ ವಲಯಗಳಿಗೆ ಕನಿಷ್ಠ.60% ಮತ್ತು ಇತರೆ ಆದ್ಯತೆಯ ವಲಯಗಳಿಗೆ ಗರಿಷ್ಠ.40% ಮೀರದಂತೆ ನಿಧಿಯನ್ನು ವಿನಿಯೋಗಿಸಬೇಕಾಗಿದ್ದು, ವಲಯಗಳ ವಿವರಗಳು ಈ ಕೆಳಗಿನಂತಿವೆ.

| | | |
|---|---|---|
| | | ಹೆಚ್ಚಿನ ಆದ್ಯತಾ ವಲಯಗಳು (60%)<br>1) ಕುಡಿಯುವ ನೀರು ಸರಬರಾಜು<br>2) ಪರಿಸರ ಸಂರಕ್ಷಣೆ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಕ್ರಮ<br>3) ಆರೋಗ್ಯ ರಕ್ಷಣೆ<br>4) ಶಿಕ್ಷಣ<br>5) ಮಹಿಳಾ ಮತ್ತು ಮಕ್ಕಳ ಕಲ್ಯಾಣ<br>6) ವೃದ್ಧರು ಮತ್ತು ವಿಶೇಷಚೇತನರ ಕಲ್ಯಾಣ<br>7) ಕೌಶಲ್ಯಾಭಿವೃದ್ಧಿ<br>8) ನೈರ್ಮಲ್ಯ<br>ಇತರೆ ಆದ್ಯತಾ ವಲಯಗಳ (40%)<br>1) ಮೂಲಭೂತ ಸೌಕರ್ಯ<br>2) ನೀರಾವರಿ<br>3) ಇಂಧನ (ಶಕ್ತಿ) ಮತ್ತು ಜಲಾನಯನ ಅಭಿವೃದ್ಧಿ<br>4) ಗಣಿ ಪರಿಸರದಲ್ಲಿನ ಪರಿಸರ ಸಂರಕ್ಷಣೆಗಾಗಿ/ ಸಂವರ್ಧನೆಗಾಗಿ ಇತರೆ ಯೋಜನೆ ವಲಯಗಳ ಕಾರ್ಯಗಳಿಗೆ ವಿನಿಯೋಗಿಸಬಹುದಾಗಿದೆ. |
| ಉ) | ಬಾಕಿ ಮೊತ್ತ ಪೂರ್ಣ ವಸೂಲಿಯಾಗುವವರೆಗೆ ಯಾವುದೇ ಕಂಪನಿಯನ್ನು ಸರ್ಕಾರಿ ಗುತ್ತಿಗೆಗಳು ಹಾಗೂ ಟೆಂಡರ್‌ಗಳಿಂದ ನಿರ್ಬಂಧಿಸುವ ಬಗ್ಗೆ ಸರ್ಕಾರ ಪರಿಗಣಿಸಿರುವುದೇ;<br>ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಗಣಿ ಗುತ್ತಿಗೆ/ ನವೀಕರಣ ನೀತಿಯನ್ನು ಪರಿಣಾಮಕಾರಿಯಾಗೀ ರೂಪಿಸುವ ಬಗ್ಗೆ ಸರ್ಕಾರದ ನಿರ್ಧಾರಗಳೇನು? | • ಮುಖ್ಯ ಖನಿಜಗಳ ಆಡಳಿತ ಮತ್ತು ನಿಯಂತ್ರಣಕ್ಕಾಗಿ ನಿಯಮಗಳನ್ನು ರೂಪಿಸುವುದು ಭಾರತ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿದೆ.<br>• ಭಾರತ ಸರ್ಕಾರದ ಎಂಎಂಡಿಆರ್ ಕಾಯ್ದೆ ಮತ್ತು Mineral (Auction) Rules-2015 ರಂತೆ ಗಣಿ ಪ್ರದೇಶಗಳನ್ನು ಹರಾಜು ಮೂಲಕ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.<br>• ಗಣಿ ಪ್ರದೇಶ ಹರಾಜಾದ ನಂತರ ಹೆಚ್ಚು ಬಿಡ್ ಮಾಡಿದ ಕಂಪನಿ/ ವ್ಯಕ್ತಿಗೆ Preferred Bidder, ತದನಂತರ ನಿಯಮಾನುಸಾರ Letter of Intent ನೀಡಲಾಗುತ್ತದೆ.<br>• Letter of Intent ಪಡೆದ ಕಂಪನಿ/ ವ್ಯಕ್ತಿಗೆ ಯಶಸ್ವಿ ಬಿಡ್‌ದಾರರು ಎಂದು ಘೋಷಿಸುವ ಪೂರ್ವದಲ್ಲಿ ಸದರಿ ಬಿಡ್ಡುದಾರರು ಸರ್ಕಾರ ನಿರ್ಧರಿಸಿದ ಬಾಕಿ ಮೊತ್ತ ಪಾವತಿಸಬೇಕಾಗುತ್ತದೆ.<br>• ಬಾಕಿ ಮೊತ್ತ ನಿರ್ಧಾರವಾಗದ ಪಕ್ಷದಲ್ಲಿ, ಸರ್ಕಾರವು ನಿಯಮಾನುಸಾರ ನಿರ್ಧರಿಸುವ ಬಾಕಿ ಮೊತ್ತ ಪಾವತಿಸಲು ಬದ್ಧನಾಗಿರುತ್ತೇನೆಂದು ಈ ಕೆಳಕಂಡಂತೆ ಮುಚ್ಚಳಿಕೆ ಪಡೆದು ಯಶಸ್ವಿ ಬಿಡ್‌ದಾರರು ಎಂದು ಘೋಷಿಸಲು ನಿಯಮಗಳಲ್ಲಿ ಅವಕಾಶವಿದ್ದು, ಅದರಂತೆ ಕ್ರಮ ವಹಿಸಲಾಗುತ್ತಿದೆ.<br>**"having cleared all dues to the Government of Karnataka arising from mining activity that the Preferred Bidder has undertaken in Karnataka in the past, if such dues have been determined to be payable by him in terms of the extant provisions of the MMDR Act, 1957 and the rules framed there under, along with an undertaking that he shall also clear all dues that the Government of Karnataka determines in future, payable by him in terms of the extant provisions of the MMDR Act, 1957 and the rules framed there under, to the Government of Karnataka arising from mining activity undertaken by him in Karnataka in the past, if such dues have not been determined;"** |

**ಸಂಖ್ಯೆ:ಸಿಐ-ಎಂಎಂಎನ್/133/2026**

(signature)

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.